# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಆರ್. ರಮೇಶ್, ಶ್ರೀ ಮೋಹನ ಕುಮಾರ್ ಕೊಂಡಜ್ಜಿ, ಶ್ರೀ ಕೆ.ಅಬ್ದುಲ್ ಜಬ್ಬರ್, ಶ್ರೀ ಮರಿತಿಬ್ಬೇಗೌಡ ಹಾಗೂ ಶ್ರೀ ಟಿ.ಎ. ಶರವಣ ಇವರುಗಳು ನಿಯಮ 72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಹೇಳಿಕೆ**

**ಸೂಚನೆ:**

ಹೆಬ್ಬಾಳದಲ್ಲಿರುವ ಸರ್ಕಾರಿ ಪಶುವೈದ್ಯಕೀಯ ಆಸ್ಪತ್ರೆಯಲ್ಲಿ ಅಂದರೆ, ಪಶುಗಳಿಗೆ ಸಂಬಂಧಪಟ್ಟಂತೆ ಮೂಳೆ ಮುರಿತ (Dislocation) ಸಂಬಂಧಿತ ಖಾಯಿಲೆಗಳಿಗೆ ತುರ್ತು ಚಿಕಿತ್ಸಾ ಸೌಲಭ್ಯಗಳು ನೀಡುವ ಚಿಕಿತ್ಸಾ ಸೌಕರ್ಯಗಳಿಲ್ಲದೆ ಪ್ರಾಣಿಗಳಿಗೆ/ರೈತರಿಗೂ ತೊಂದರೆಯಾಗುತ್ತಿರುವುದರಿಂದ ದನಕರುಗಳಿಗೆ ಸಕಾಲದಲ್ಲಿ ಚಿಕಿತ್ಸೆ ದೊರೆಯದೆ ಸಾವಿಗೀಡಾಗುತ್ತಿರುವುದು, Permanent ಅಂಗವೈಕಲ್ಯತೆ ಉಂಟಾಗುವುದು ಕಂಡುಬರುತ್ತಿರುವುದರಿಂದ ಇದನ್ನು ತಪ್ಪಿಸುವ ಸಲುವಾಗಿ ಸದರಿ ಆಸ್ಪತ್ರೆಯಲ್ಲಿ ದಿನದ 24 ಗಂಟೆಗಳೂ ತುರ್ತು ಚಿಕಿತ್ಸಾ ಘಟಕ With well equipped facilities ದೊರೆಯುವಂತೆ ಮಾಡಿಕೊಡಬೇಕೆಂಬ ವಿಷಯದ ಬಗ್ಗೆ ಪಶುಸಂಗೋಪನೆ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಹೇಳಿಕೆ:**

ಹೆಬ್ಬಾಳದ ಪಶು ಆಸ್ಪತ್ರೆಯಲ್ಲಿ ದನ ಕರುಗಳಿಗೆ ಮೂಳೆ ಮುರಿತದಂತಹ ಕೇಸುಗಳಿಗೆ ಈಗಾಗಲೇ ಚಿಕಿತ್ಸೆ ಮತ್ತು ಸರ್ಜರಿಯನ್ನು ಮಾಡಲಾಗುತ್ತಿದೆ. ಆಧುನಿಕ ಉಪಕರಣಗಳನ್ನು ಖರೀದಿಸಿ ಇನ್ನೂ ಉತ್ತಮ ರೀತಿಯ ಚಿಕಿತ್ಸೆಯನ್ನು ಕೊಡಲು ಕ್ರಮ ತೆಗೆದುಕೊಳ್ಳಲಾಗುವುದು.

ಹೆಬ್ಬಾಳದ ಪಶುವೈದ್ಯಕೀಯ ಆಸ್ಪತ್ರೆಯಲ್ಲಿ ಈಗಾಗಲೇ ಸಂಜೆಯ ನಂತರ ಎಮರ್ಜನ್ಸಿ ಕೇಸುಗಳನ್ನು ನೋಡಲಾಗುತ್ತಿದೆ. ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ತದನಂತರ 24 X 7 ಆಸ್ಪತ್ರೆಯನ್ನು ಪ್ರಾರಂಭಿಸಲಾಗುವುದು. ಆತನಕ ಗುತ್ತಿಗೆ ಆಧಾರದ ಮೇಲೆ ಪಶುವೈದ್ಯರನ್ನು ನೇಮಿಸಿಕೊಂಡು ರಾತ್ರಿ ಸಮಯದಲ್ಲಿ ಆಸ್ಪತ್ರೆ ನಡೆಸುವ ಬಗ್ಗೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

**ಸಂಖ್ಯೆ: ಪಸಂಮೀ ಇ-361 ಪಅಸೇ 2022**

**(ಪ್ರಭು.ಬಿ. ಚವ್ಹಾಣ್)**
ಪಶುಸಂಗೋಪನೆ/ಸಚಿವರು